ಪಾವಗಡ ತಾಲ್ಲೂಕು

1. ಪಾವಗಡ
2. ಹರಿಹರಪುರ
3. ಸಾಸಲಕುಂಟೆ
4. ಎತ್ತಿನಹಳ್ಳಿ
5. ಕನಿಕಲಬಂಡೆ
6. ವೈ.ಎನ್. ಹೊಸಕೋಟೆ
7. ತಿಪ್ಪಯ್ಯನದುರ್ಗ
8. ಜಡೇನಹಳ್ಳಿ
9. ಮಂಗಳವಾಡ
10. ಪಳವಳ್ಳಿ
11. ತಿರುಮಣಿ
12. ರಾಯಚರ್ಲು
13. ಹುಸೇನ್‌ಪುರ
14. ವಳ್ಳೂರು
15. ಬಿ.ಕೆ. ಹಳ್ಳಿ

ಬೆಳಗಾವಿ ಜಿಲ್ಲೆ ಅಥಣಿ ತಹಸೀಲ್ದಾರ್ ಕಛೇರಿಯಲ್ಲಿ ರೈತರಿಗೆ ಪಹಣಿ ದಾಖಲೆ ನೀಡುವಲ್ಲಿ ವಿಳಂಬ

224 (373) ಶ್ರೀ ಲಕ್ಷ್ಮಣ್ ಸಂಗಪ್ಪ ಸಾವದಿ (ಅಥಣಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಬೆಳಗಾವಿ ಜಿಲ್ಲೆ, ಅಥಣಿ ತಹಸೀಲ್ದಾರ ಕಛೇರಿಯಲ್ಲಿ ರೈತರಿಗೆ ಪಹಣಿ ಪತ್ರಿಕೆ ಪಡೆಯಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದರೆ, ಹೋಬಳಿ ಮಟ್ಟದಲ್ಲಿ ರೈತರಿಗೆ ಪಹಣಿ ಪತ್ರಿಕೆ ಒದಗಿಸುವಂತೆ ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಪಹಣಿ ದಾಖಲೆ ಪಡೆಯಲು ರೈತರಿಗೆ ಒಂದು ದಿನಕ್ಕೆ ರೂ. 150 ರಿಂದ 200 ರವರೆಗೆ ಹಣ ಖರ್ಚು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ರೈತರ ಹಿತದೃಷ್ಟಿಯಿಂದ ತಕ್ಷಣ ಆಯಾ ಜಿಲ್ಲೆಗಳ ತಾಲ್ಲೂಕು ಮಟ್ಟದಲ್ಲಿ ಹೋಬಳಿ ವಲಯದಲ್ಲಿ ಪಹಣಿ ದಾಖಲೆ ಸಿಗುವಂತೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ. ಬೆಳೆ ವಿಮೆಯಿಂದಾಗಿ ಪಹಣಿ ಪಡೆಯಲು ತಹಸೀಲ್ದಾರರ ಕಾರ್ಯಾಲಯಕ್ಕೆ ಬರುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಇದನ್ನು ಪರಿಗಣಿಸಿ ಈಗ ಅಥಣಿ ತಾಲ್ಲೂಕಿನಲ್ಲಿ ಹೆಚ್ಚುವರಿಯಾಗಿ ಒಂದು ಕಿಯಾಸ್ಕ್‌ನ್ನು ಪ್ರಾರಂಭಿಸಲಾಗಿದೆ. ಎರಡು ಕಿಯಾಸ್ಕ್‌ಗಳಿಂದ ಪಹಣಿಗಳನ್ನು ವಿತರಿಸಲಾಗುತ್ತಿದೆ. ಕಾರ್ಯಾಲಯದ ಸಿಬ್ಬಂದಿಯಿಂದ ಬೆಳಿಗ್ಗೆ 9.00 ಗಂಟೆಯಿಂದ ರಾತ್ರಿ ಸುಮಾರು 10.00 ಗಂಟೆಯವರೆಗೂ ಪಹಣಿಗಳನ್ನು ವಿತರಿಸಲಾಗುತ್ತಿದೆ.

ಆ) 'ಭೂಮಿ' ಯೋಜನೆಯನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದೊಂದಿಗೆ ಗ್ರಾಮ ಮಟ್ಟಕ್ಕೆ ವಿಕೇಂದ್ರೀಕರಿಸಲಾಗಿದೆ.

ಇ) ಬಂದಿರುವುದಿಲ್ಲ.

ಈ) 'ಭೂಮಿ' ಯೋಜನೆಯನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದೊಂದಿಗೆ ಗ್ರಾಮ ಮಟ್ಟಕ್ಕೆ ವಿಕೇಂದ್ರೀಕರಿಸಲಾಗಿದೆ.